# ಅಡಿಕೆ–ಕ್ಯಾನ್ಸರ್ ಅಂಡ್ ಬಿಯಾಂಡ್ ಕೃತಿ ಬಿಡುಗಡೆ

ಸಂ.ಕ.ಸಮಾಚಾರ ಮಂಗಳೂರು

'ಅರಕಾನಟ್–ಹಿಸ್ಟರಿ,ಕಾನ್ಸಿಟ್ಯುಯೆಂಟ್, ಕ್ಯಾನ್ಸರ್ ಅಂಡ್ ಬಿಯಾಂಡ್' ಕೃತಿ ಬಿಡುಗಡೆ ಕಾರ್ಯಕ್ರಮವು ಬುಧವಾರ ಕ್ಯಾಂಪ್ಕೊ ಸಂಸ್ಥೆಯಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಅಡಿಕೆಯ ಬಗ್ಗೆ ವಿವಿಧ ಅಪಸ್ವರಗಳು ಕೇಳಿ ಬರುತ್ತಿರುವ ಸಂದರ್ಭ ಅಡಿಕೆಯ ಕುರಿತಂತೆ ನಡೆಯುವ ಸಂಶೋಧನೆಗಳಿಗೆ ಕ್ಯಾಂಪ್ಕೊ ಸಂಪೂರ್ಣ ಬೆಂಬಲ ನೀಡಲಿದೆ ಎಂದರು.

ದೇಶದ 10 ಶ್ರೀಮಂತ ಜಿಲ್ಲೆಗಳಲ್ಲಿ ದ.ಕ.ಜಿಲ್ಲೆ 8ನೇ ಸ್ಥಾನದಲ್ಲಿದೆ ಎಂಬುದು ಇತ್ತೀಚೆಗೆ ವರದಿಯಾಗಿದೆ. ಈ ಸ್ಥಾನ ಪಡೆಯಲು ಅಡಿಕೆಯೇ ಪ್ರಮುಖವಾಗಿದೆ. ಇಲ್ಲಿನ ಜನ ಜೀವನ, ಸಂಸ್ಕೃತಿ, ಆಚಾರ–ವಿಚಾರ, ಶಿಕ್ಷಣ ಸಹಿತ ಇಡೀ ವ್ಯವಸ್ಥೆಯ ಹಿಂದೆ ಅಡಿಕೆ ಪ್ರಮುಖ ಪಾತ್ರ ವಹಿಸಿದೆ. ಈ ನಿಟ್ಟಿನಲ್ಲಿ ಅರಕಾನಟ್ ಕೃತಿ ಪೂರಕವಾಗಿದೆ ಎಂದು ಹೇಳಿದರು.

ಸಂಶೋಧಕ ಡಾ.ವಿಘ್ನೇಶ್ವರ ವರ್ಮುಡಿ ಮಾತನಾಡಿ ಕೃತಿಯಲ್ಲಿ ಅಡಿಕೆಯ ಇತಿಹಾಸ, ಆರ್ಥಿಕ ಸ್ಥಿತಿಗತಿ, ಅಡಿಕೆಯ ಗುಣಗಳು, ಕ್ಯಾನ್ಸರ್‌ಕಾರವೋ ಅಲ್ಲವೋ ಎನ್ನುವ ಬಗ್ಗೆ ವಿವರವಿದೆ. ಈ ಕೃತಿಯು ಅಡಿಕೆ ಬೆಳೆಯ ಬಗ್ಗೆ ಸುಪ್ರೀಂಕೋರ್ಟ್, ವಿಶ್ವ ಆರೋಗ್ಯ ಸಂಸ್ಥೆಯ ಮುಂದೆ ವಾದ ಮಂಡಿಸಲು ನೆರವಾಗಲಿದೆ ಎಂದರು.




ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಡಿಕೆ ಬೆಳೆಯಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯ ಸೇರಿಸಬೇಕು. ಸರಕಾರ ಅಡಿಕೆ ಬೆಳೆಗಾರರ ಹಿತ ಕಾಯದಿದ್ದಲ್ಲಿ ರಾಜ್ಯದ 28 ಸಂಸದರನ್ನು ಕಳೆದುಕೊಳ್ಳುತ್ತೇವೆ ಎನ್ನುವ ವಿಚಾರ ಬಂದಾಗ ಈ ಸಮಸ್ಯೆಗೆ ಸರಕಾರ ಪರಿಹಾರ ನೀಡಲು ಸಾಧ್ಯ. ಅಡಕೆಯಿಂದ ಸರಕಾರಕ್ಕೆ ಆದಾಯ ಬರುತ್ತದೆ, ಉದ್ಯೋಗ ಸೃಷ್ಟಿಯಾಗುತ್ತದೆ, ಹಣದ ಚಲಾವಣೆಯಾಗುತ್ತದೆ. ದ.ಕ.ದಲ್ಲಿ ಬ್ಯಾಂಕ್, ಶಿಕ್ಷಣ ಸಂಸ್ಥೆಗಳು ಅಡಿಕೆಯಿಂದಾಗಿಯೇ ಬೆಳೆದಿದೆ. ಅಡಿಕೆ ಸೋತಲ್ಲಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳು ಸೋಲಲಿವೆ ಎಂದು ಅಭಿಪ್ರಾಯಪಟ್ಟರು.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ. ರವಿ ಅಡಿಕೆ ದೇಶದಲ್ಲಿ ಪ್ರಮುಖ ಕಚ್ಚಾ ವಸ್ತುವಾಗಿದೆ. ಅಡಿಕೆ ಕ್ಯಾನ್ಸರ್‌ಕಾರಕವೆಂಬ ಚರ್ಚೆಯ ಅನುಮಾನಗಳನ್ನು ಈ ಕೃತಿ ಹೋಗಲಾಡಿಸಲಿದೆ ಎಂದರು.

ಕೃತಿಕಾರ ಹಾಗೂ ಎನ್‌ಐಟಿಕೆ ಇಂಜಿನಿಯರ್ ಡಾ. ಪ್ರಸನ್ನ ಬೇಲೂರು ಮಾತನಾಡಿ, ನಾನು ಸ್ವತಃ ಅಡಿಕೆ ಬೆಳೆಗಾರನಾಗಿದ್ದು, ಆ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದೇನೆ. ಅಡಿಕೆಯ ಬಗ್ಗೆ ಅಪಸ್ವರಗಳು ಕೇಳಿ ಬಂದಾಗ ಬೆಳೆಗಾರ ಹಾಗೂ ಸಂಶೋಧಕನಾಗಿ ಸುಮ್ಮನಿರಲು ಸಾಧ್ಯವಾಗಲಿಲ್ಲ. ಕೋವಿಡ್ ಸಂದರ್ಭ ಬಳಸಿಕೊಂಡು ಎನ್‌ಐಟಿಕೆ ಸಹಕಾರದೊಂದಿಗೆ ಸಂಶೋಧನೆ ನಡೆಸಲು ಆರಂಭಿಸಿದೆ. ರಾಜ್ಯದ ವಿವಿಧ ಕಡೆ ಅಧ್ಯಯನ ನಡೆಸಿ ಇಂಗ್ಲಿಷ್‌ನಲ್ಲಿ ಕೃತಿ ಹೊರತಂದಿದ್ದೇನೆ. ಮುಂದೆ ಕನ್ನಡದಲ್ಲೂ ತರುವ ಉದ್ದೇಶ ಇದೆ ಎಂದರು.

ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಹೇಶ್ ಪುಚ್ಚಪ್ಪಾಡಿ ಮಾತನಾಡಿದರು. ಗೋವಿಂದ ಭಟ್ ಕೃತಿಕಾರರ ಪರಿಚಯ ಮಾಡಿದರು. ಕ್ಯಾಂಪ್ಕೊ ನಿರ್ದೇಶಕ ಡಾ.ಬಿ.ವಿ. ಸತ್ಯನಾರಾಯಣ ಸ್ವಾಗತಿಸಿದರು. ಡಿಜಿಎಂ ಶ್ಯಾಮ್ ವಂದಿಸಿದರು. ಮುಖ್ಯ ವ್ಯವಸ್ಥಾಪಕ ಜಯ ಭಂಡಾರಿ ಕಾರ್ಯಕ್ರಮ ನಿರೂಪಿಸಿದರು.

Samyukta Karnataka, Date: 20/02/2026, p. 03